

## ಮಮತೆಯ ಮಡಿಲು

ಮರಿ ಹಕ್ಕಿ ರೆಕ್ಕೆ ಬಿಚ್ಚಿ
ಹಾರಿತು ಬಾನ ನೆಚ್ಚಿ
ಸಹಿಸಿತೆ ತುತ್ತನಿತ್ತು
ಸಲುಹಿದ ತಾಯಿ ಹಕ್ಕಿ

ತಿರುಗಿತು ರೆಕ್ಕೆ ಬಡಿದು
ಬಾನಲ್ಲಿ ಗಿರಕಿ ಹೊಡೆದು
ಬಳಲಿತು ಪುಟ್ಟ ದೇಹ
ನೆನೆಸಿತು ತಾಯಿ ಮೋಹ

ಬಾಯಾರಿ ದೂರ ಅಲೆದು
ಹೊಳೆಯಲ್ಲಿ ನೀರ ಕುಡಿದು
ಕುಳಿತಿತ್ತು ಮರದ ಮೇಲೆ
ಮನದಲ್ಲಿ ನೆನಪ ಮಾಲೆ

ಏಕಾಂತದಾಸೆ ಬತ್ತಿ
ಗೂಡಿನಾ ನೆನಪು ಒತ್ತಿ
ಕಂಡಂತ ಕನಸು ನೂರು
ಕನಸೆಲ್ಲ ಚೂರು ಚೂರು

ಮರಳಿತು ತಾಯಿ ಅರಸಿ
ಕಂಬನಿಯ ಕೋಡಿ ಹರಿಸಿ
ಕುಳಿತಿತ್ತು ಅಳುತ ತಾಯಿ
ಮರಿಹಕ್ಕಿ ಆಗಮನವ ಬಯಸಿ

**ವಿಶ್ವೇಶ್ವರ ಭಟ್, ಮಂಗಳೂರು**

## ಸಹ ಯಾತ್ರಿಕರು

ಹೊಟ್ಟೆಬಾಕ ಹಕ್ಕಿಗಳಲ್ಲ ನಾವು
ನಮ್ಮ ಹೊಟ್ಟೆಯೆಂಬ ಗೂಡು
ತುಂಬುವುದೇ ಇಲ್ಲ

ನೀರಲ್ಲಿ ನೆಲದಲ್ಲಿ
ಬಗ್ಗಿ ಬಗ್ಗಿ ಕ್ರಿಮಿಕೀಟ ಹೆಕ್ಕುವ
ಜೊತೆ ಜೊತೆಗೆ ಹೆಜ್ಜೆ ಹಾಕುವ
ಸಹ ಯಾತ್ರಿಕರು ನಾವು

ಇಡೀ ಮೈಯಲ್ಲಿ ಕಸುವಿಲ್ಲ
ಉಸಿರಿರುವ ತನಕ
ಹೊಟ್ಟೆಪಾಡು ನಡೆಯಬೇಕಲ್ಲ!

ನಿಮಗೋ ವಂಶೋದ್ಧಾರಕರಿಗಾಗಿ
ಕೂಡಿಡುವ ಬಯಕೆ
ನಮಗೋ ಇದ್ದಷ್ಟೇ, ಇಷ್ಟಿಷ್ಟೇ
ಉಣ್ಣುವ ಕನವರಿಕೆ.

**ಸುಧಾ ಜಯಪ್ರಕಾಶ ತಲವಾಟ**

## ಕತೆಗಳು ನೂರಾರಿವೆ

ಕನಸುಗಳ ಬೆನ್ನ ಹೊತ್ತಿ
ಸಾಗುತ್ತಿದೆ ಪಯಣ
ನಮ್ಮ ನೋವಿಗೆ ದನಿಯ ಹುಡುಕುತ್ತ.
ಊರ ಹೊರಗಿನ
ತುಂಬಿದ ಕೆರೆಯಲ್ಲಿ ನಮ್ಮ ಬದುಕು.
ಹಸಿವಿನ ಊರಲ್ಲಿ
ಹಗಲು ರಾತ್ರಿ ತಿಳಿಯುತ್ತಿಲ್ಲ
ನಡುವೆ ಕನಸುಗಳು ಕಾಡುತ್ತಿವೆ.
ಉಸಿರಿನ ಧ್ವನಿಗೆ
ಪ್ರತಿಧ್ವನಿ ಹುಡುಕುತ್ತಿದೆ
ತಾಯಿ ರೆಕ್ಕೆಯ ಕತ್ತರಿಸಿ.
ತಿಳಿ ಆಗಸದಲ್ಲಿ
ಸಿಕ್ಕೇ ಸಿಗುವುದು
ಕನಸುಗಳ ಮೊಟ್ಟೆ ಇಡಲು
ಒಂದು ತಾವು

**ದ್ಯಾವನೂರು ಮಂಜುನಾಥ್**